(ಸಾಕ್ಷಿಗೆ ದಿನಾಂಕ: 24.04.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುঃ ಶ್ರೀಮತಿ ಪಿ.ಯು., ಪ್ರತಿವಾದಿಗಳ ಪರ ವಕೀಲರಿಂದঃ**

ನನ್ನ ಮತ್ತು ಪ್ರತಿವಾದಿಗಳ ನಡುವೆ ಹಣದ ಮರುಪಾವತಿ ಕುರಿತು ಯಾವುದೇ ಮಾತುಕತೆಯಾಗಿರುವುದಿಲ್ಲ. ಪ್ರತಿವಾದಿಯರು ಅಸಲನ್ನು ಮಾತ್ರ ನೀಡುವುದಾಗಿ ಊರಿನ ಹಿರಿಯರ ಮೂಲಕ ನನಗೆ ತಿಳಿಸಿರುತ್ತಾರೆ ಎಂದರೆ ನಾನು ಪ್ರತಿವಾದಿಯರಿಗೆ ಸಾಲದ ರೂಪದಲ್ಲಿ ಹಣ ನೀಡಿರುವುದಿಲ್ಲ ಎಂದು ನುಡಿಯುತ್ತೇನೆ. ಪ್ರತಿವಾದಿಯರು ಬಡ್ಡಿ ಹಣವನ್ನು ನೀಡುವುದಿಲ್ಲ ಎಂದು ತಿಳಿದುಬಂದ ನಂತರವೇ ನಾನು ಭದ್ರತೆಗಾಗಿ ಸದರಿಯವರಿಂದ ನಿ.ಪಿ.1ರಂತೆ ದಾಖಲೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರೇ ಪ್ರಸ್ತುತವಾಗಿ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ನಾನು ನೀಡಿದ ಸಾಲದ ಹಣಕ್ಕೆ 1ನೇ ಪ್ರತಿವಾದಿ ಬಡ್ಡಿಯನ್ನು ನೀಡದ ಕಾರಣ ನಾನು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮಗ ದೇವವರ್ಧನ್ ಮಾತ್ರ ಪ್ರತಿವಾದಿಯರ ಜೊತೆ ವ್ಯವಹರಿಸಿರುತ್ತಾರೆ ಎಂದರೆ ನಾನು, ನನ್ನ ಮಗ ಹಾಗೂ ಊರಿನ ಕೆಲವರು ಸೇರಿ ವ್ಯವಹರಿಸಿರುತ್ತೇವೆ ಎಂದು ನುಡಿಯುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ದಾಖಲೆಗಳ ಪ್ರತಿಗಳನ್ನು ನಾನು ಪಡೆದುಕೊಂಡಿರುವುದಿಲ್ಲ. ಕರಾರಿನ ಅನುಷ್ಠಾನಕ್ಕೆ 18 ತಿಂಗಳು ವಾಯಿದೆಯನ್ನು ಏಕೆ ನಿಗಧಿಪಡಿಸಲಾಗಿರುತ್ತದೆ ಎಂದರೆ ಪ್ರತಿವಾದಿಯರು 11ಇ ನಕ್ಷೆ ಹಾಗೂ ಇತರೆ ದಾಖಲೆಗಳನ್ನು ಪಡೆಯಲು ಸಮಯ ಕೋರಿದ್ದರಿಂದ 18 ತಿಂಗಳು ವಾಯಿದೆಯನ್ನು ನಿಗಧಿಪಡಿಸಲಾಗಿತ್ತು ಎಂದು ನುಡಿಯುತ್ತೇನೆ. ದಾವಾ ಸ್ವತ್ತು ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ರೂ.6 ಲಕ್ಷ ಹಣವನ್ನು ಪ್ರತಿವಾದಿಯರಿಗೆ ನಗದಾಗಿ ನೀಡಲಾಗಿರುತ್ತದೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತಿಳಿದು ಬಂದ ನಂತರ 1ನೇ ಪ್ರತಿವಾದಿ ಹಾಗೂ ಅವರ ಮಕ್ಕಳಿಂದ ಮೋಸದಿಂದ ನಿ.ಪಿ.1 ದಾಖಲೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರಿಗೆ ಯಾವತ್ತೂ ದಾವಾ ಸ್ವತ್ತನ್ನು ಕ್ರಯ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ನೀಡಿದ ಸಾಲದ ಭದ್ರತೆಗಾಗಿ ಸದರಿಯವರಿಗೆ ಸುಳ್ಳು

ನಿರೂಪಣೆ ಮಾಡಿ ಮೋಸದಿಂದ ಸದರಿಯವರಿಂದ ನಿ.ಪಿ.1ರಂತೆ ದಾಖಲೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಪ್ರತಿವಾದಿಯರು ಈಗಲೂ ನನ್ನಿಂದ ಪಡೆದ ಸಾಲವನ್ನು ಬಡ್ಡಿ ಸಮೇತ ನೀಡಲು ತಯಾರಿದ್ದರೂ ಸಹ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿ.ಪಿ.1 ದಾಖಲೆಯನ್ನು ಸೃಷ್ಟಿಸಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.